ತುಂಗಭದ್ರ ಎಡದಂಡೆ ಕಾಲುವೆಯ ಸಮಸ್ಯೆ

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತುಂಗಭದ್ರ ಎಡದಂಡೆ ಕಾಲುವೆಯ ಸಮಸ್ಯೆಯ ಬಗ್ಗೆ ನನ್ನ ಕೊಠಡಿಯಲ್ಲಿ ಸಭೆ ಸೇರಿ ಈಗಾಗಲೇ ನೀರಾವರಿ ಸಚಿವರು, ಶಾಸಕರು ಮತ್ತು ಸಂಸದರು ಒಳಗೊಂಡಂತೆ ಎಲ್ಲರೂ ಇದರ ಬಗ್ಗೆ ಚರ್ಚೆ ಮಾಡಿ ಈಗಾಗಲೇ ಒಟ್ಟಾರೆ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಮೇ 25ರವರೆಗೆ ನೀರು ಹರಿಯುವುದನ್ನು ಈಗಾಗಲೇ ನಿಲ್ಲಿಸಿದ್ದಿರಿ ಇನ್ನು ಎರಡು ತಿಂಗಳೊಳಗಾಗಿ ಆ ದುರಸ್ಥಿ ಕಾರ್ಯವು ಸಂಪೂರ್ಣವಾಗಿ ಮುಗಿಯಬೇಕಾಗುತ್ತದೆ. ಈಗಾಗಲೇ ತಾವು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ತಾವು ಲಿಖಿತ ಮೂಲಕವಾಗಿ ಇವತ್ತು ಎಲ್ಲರಿಗೂ ಕೂಡ ತಿಳುವಳಿಕೆಯನ್ನು ಕೊಟ್ಟಿದ್ದಿರಿ. ಈಗಾಗಲೇ ಎಲ್ಲಾ ಅಂದಾಜುಗಳನ್ನು ಮಾಡಿಸಿ ಇಮ್ಮೀಡಿಯೇಟ್ ಆಗಿ ಇವತ್ತು ಬಜೆಟ್ ಪ್ರಾವಿಷನ್ ಇಲ್ಲದಿದ್ದರೂ ಕೂಡ 18 ಕೋಟಿ ರೂಗಳ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಂಡು ಮುಗಿಸಿಕೊಡುತ್ತೇನೆಂಬ ಆಶ್ವಾಸನೆಯನ್ನು ಜನಪ್ರತಿನಿಧಿಗಳಿಗೆ ಕೊಟ್ಟಿದ್ದೀರಿ. ಈಗಾಗಲೇ ಏಪ್ರಿಲ್ 25ಕಳೆದು ಏಪ್ರಿಲ್ 28ಆಗುತ್ತಾ ಬಂದಿದೆ. ಇದುವರೆಗೂ ಯಾವುದೇ ವಿಧವಾದ ಕಾರ್ಯಕ್ರಮಗಳು ಆಗಿಲ್ಲವೆಂದು ತಮಗೆ ಗೊತ್ತಿರುವಂಥದ್ದು. ತಾವು ಜನಪ್ರತಿನಿಧಿಗಳಿಗೆ, ರೈತ ಮುಖಂಡರಿಗೆ, ಏನು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಅದರ ಪ್ರಕಾರವಾಗಿ ನೀವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ ಎನ್ನುವ ಬಗ್ಗೆ ಒಂದು ಮಾತನ್ನು ಹೇಳಬೇಕು. ಈಗಾಗಲೇ ನಾವು ನಿನ್ನೆಯಿಂದಲೂ ಕೂಡ ಈ ರೈತರ ಸಮಸ್ಯೆ ಒಳಗೊಂಡಂತೆ ಅವರ ಭಾವನೆಗೆ, ಅವರ ಕಷ್ಟಕ್ಕೆ ಸಹಾಯಕವಾಗುವಂತಹ ರೀತಿಯಲ್ಲಿ ಇಡೀ ಸದನ ಎರಡು ದಿವಸ ಕುಳಿತು ಚರ್ಚೆ ಮಾಡಿದೆ. ಎರಡು ಕಡೆಯವರು ಕುಳಿತುಕೊಂಡು ಪರಿಹಾರವನ್ನು ಕಂಡುಹಿಡಿಯತಕ್ಕಂತಹ ಸಮಸ್ಯೆ ಇರಬೇಕಾದರೆ ಈಗ ಅಂತಹದ್ದೇ ಒಂದು ರೈತರ ಸಮಸ್ಯೆ ಇದೂ ಕೂಡ ಆಗಿದ್ದು, ಸುಮಾರು 6 ಲಕ್ಷ ಎಕರೆಗೆ ಸಂಬಂಧಿಸಿದ ರೈತರ ಪ್ರಶ್ನೆಯಾಗಿದೆ. ಇವತ್ತು ನೀವು 20 ಕೋಟಿ ರೂಗಳನ್ನು ಖರ್ಚು ಮಾಡುವುದರ ಮುಖೇನ ಸುಮಾರು 6 ಲಕ್ಷ ಎಕರೆಯಲ್ಲಿ ಬೆಳೆ ಬೆಳೆಯಬಹುದು ಅಂದರೆ ಅದರ ಅಂದಾಜು ಬೆಲೆ ಸುಮಾರು 600 ಕೋಟಿ ರೂಗಳು ಆಗಬಹುದು. ಈಗ ಹಣವನ್ನು ಒದಗಿಸಿದೆ ಸುಮಾರು 6 ಲಕ್ಷ ಎಕರೆ ಭೂಮಿಗೆ ನೀರನ್ನು ಕೊಡದೇ ಹೋದರೆ ಸುಮಾರು 600 ಕೋಟಿ ರೂಗಳು ಹಾನಿಯಾಗುವಂತಹ ಪರಿಸ್ಥಿತಿ ಇದೆ. ಇನ್ನು ಕೇವಲ ಎರಡು ತಿಂಗಳುಗಳು ಮಾತ್ರವಿದ್ದು ಅಷ್ಟರೊಳಗೆ ತಾವು ದುರಸ್ಥಿ ಕಾರ್ಯವನ್ನು ಮಾಡಬೇಕಾಗಿದೆ. ನನಗೆ ಗೊತ್ತಿರುವ ಪ್ರಕಾರ ಇದುವರೆಗೂ ಕೂಡ ತಮ್ಮ ಕಡೆಯಿಂದ ಆಗಿಲ್ಲ. ಇವತ್ತು ರೈತರು ಬೀದಿಗಿಳಿದು ಹೋರಾಟ ಮಾಡುವಂತಹ ಸಂದರ್ಭ ಎದುರಾಗಬಾರದು ಎಂಬ ದೃಷ್ಟಿಯಿಂದ ಮತ್ತು ರಾಜ್ಯ ಹಾಗೂ ರೈತರ ಹಿತದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ಈ ದಿಸೆಯಲ್ಲಿ ಯಾವ ತರಹದ ಕಾರ್ಯಕ್ರಮವನ್ನು ತಾವು ಹಾಕಿದ್ದೀರಿ ಎನ್ನತಕ್ಕಂಥದ್ದನ್ನು ತಾವು ಹೇಳಬೇಕು. ಹಣಕಾಸಿನ ಸಚಿವರೂ ಕೂಡ ಇಲ್ಲೇ ಇದ್ದಾರೆ, ಅವರು ಕೂಡ ಇದರ ಬಗ್ಗೆ ಗಮನವನ್ನು ಹರಿಸಿ ಉತ್ತರವನ್ನು ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಕೊನೆಯದಾಗಿ ಕಾವೇರಿ ನೀರನ್ನು ತೆಗೆದುಕೊಂಡು ಹೋಗುವಂತಹ ನಾಲೆಯನ್ನು ದುರಸ್ಥಿ ಮಾಡುವಂತಹ ಸಂದರ್ಭದಲ್ಲಿ ಬಜೆಟ್ ಅಲೋಕೇಷನ್ ಮೀರಿ ಕೆಲಸವನ್ನು ಮಾಡಿ ನಿಜವಾಗಲೂ ತಾವು ದೃಢವಾದ ನಿಲುವನ್ನು ತೆಗೆದುಕೊಂಡು ಆ ರೈತರ

ಕಷ್ಟಕ್ಕೆ ಸ್ಪಂದಿಸಿದ್ದೀರಿ. ಅಂಥದ್ದೇ ನಿಲುವನ್ನು ಈ ಸಂದರ್ಭದಲ್ಲಿ ಇದಕ್ಕೂ ಸಹ ತೆಗೆದುಕೊಳ್ಳಬೇಕಾಗುತ್ತದೆ. ಈಗ ಕೇವಲ 20ಕೋಟಿ ರೂಪಾಯಿಗಳು ಮಾತ್ರ ಸರ್ಕಾರಕ್ಕೆ ಹೊಣೆ ಆಗುತ್ತದೆ. ಅದನ್ನು ಯಾವ ರೀತಿ ಒದಗಿಸುತ್ತೀರಿ? ಯಾವ ರೀತಿ ಕೆಲಸ ಪ್ರಾರಂಭ ಮಾಡಿಸುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಹೆಚ್ಚು ಮಹತ್ವದ್ದು ಏನೂ ಇಲ್ಲ, ಇದರಲ್ಲಿ ಎರಡೇ ಎರಡು ವಿಚಾರಗಳು ಇರುವಂಥದ್ದು.

ಶ್ರೀ ರಂಗದೇವರಾಯಲು (ಗಂಗಾವತಿ) : ಮಾನ್ಯ ಅಧ್ಯಕ್ಷರೆ, ಕಳೆದ ಆಯವ್ಯಯದಲ್ಲಿ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಮೆಯಿಂಟೆನೆನ್ಸ್‌ಗೆ 9 ಕೋಟಿ ರೂಪಾಯಿ ಹೋಗುತ್ತದೆ. ಇನ್ನು ಒಂದು ಕೋಟಿ ರೂಪಾಯಿಗಳಲ್ಲಿ ಏನು ಕೆಲಸ ಮಾಡುತ್ತಾರೆ? ಈಗ 8 1/2 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇವೆ. 11ನೇ ಮೆಯಿನ್‌ನಲ್ಲಿ ಈ ವರ್ಷ ರಿಪೇರಿ ಕೆಲಸ ಮಾಡದಿದ್ದರೆ ಇಡೀ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ರೈತರನ್ನು ಖೂನಿ ಮಾಡಿದಂತಾಗುತ್ತದೆ. 11ನೇ ಮೆಯಿನ್ ರಿಪೇರಿ ಮಾಡಿ ನೀರು ಕೊಟ್ಟರೆ ಮಾತ್ರ ರೈತ ಉದ್ಧಾರವಾಗುತ್ತಾನೆ. ಮೊನ್ನೆ ಫೆಬ್ರವರಿಯಲ್ಲಿ ಕೆನಾಲ್ ಗೇಟ್ ಹಾಕದೆ 7 ಕೋಟಿ ರೂಪಾಯಿ ನಷ್ಟವಾಗಿದೆ. ಈ ಬಗ್ಗೆ ನನ್ನ ಹತ್ತಿರ ವರದಿ ಇದೆ. ನೀವು ಬೇಕಾದರೆ ಕಂದಾಯ ಇಲಾಖೆಯ ಸಚಿವರನ್ನು ಕೇಳಿ. ಬೀದರ್, ಗುಲ್ಬರ್ಗಾ ವಿಷಯ ಕೇಳಿದಾಗ ನಾನು ರಾಯಚೂರು ವಿಷಯವನ್ನು ಎತ್ತಿದೆ. ಏಕೆಂದರೆ ನೀರಾವರಿ ವಿಚಾರದಲ್ಲಿ ನಾವು ಎಷ್ಟು ಕಷ್ಟದಲ್ಲಿದ್ದೇವೆ ನಾವು ಎಷ್ಟು ಸಾಲ ತಂದು ಮಾಡುತ್ತಿದ್ದೇವೆ ಎಂಬುದು ತಮಗೆ ಗೊತ್ತಿದೆ. ಕೆನಾಲ್ ವರ್ಕ್ ಆಗಿ ರೈತರಿಗೆಮುಟ್ಟಬೇಕಾದರೆ 1-1 1/2ತಿಂಗಳು ಬೇಕಾಗುತ್ತದೆ. ಅಷ್ಟರಲ್ಲಿ ಬೆಳೆ ಎಲ್ಲಾ ಒಣಗಿಹೋಗುತ್ತದೆ. ಇದರ ಬಗ್ಗೆ ತಾವು ಏನು ಮಾಡುತ್ತೀರಿ? ಹೋದ ವರ್ಷ ನಾವು ಸಾಧಾರಣ ಮೇ ತಿಂಗಳಲ್ಲಿ ಕೆನಾಲ್ ಕೆಲಸ ತೆಗೆದುಕೊಂಡು ಜೂನ್-ಜುಲೈನಲ್ಲಿ ಮುಗಿಸುತ್ತೇವೆಂದು ಹೇಳಿದಿರಿ.....

ಅಧ್ಯಕ್ಷರು : ಹೋದ ವರ್ಷದ್ದು ಆಯಿತಲ್ಲಾ, ಈ ವರ್ಷದ್ದು ಏನು ಮಾಡುತ್ತಾರೆಂದು ಹೇಳೋಣ.

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಜಯಚಂದ್ರ ಅವರು ಮತ್ತು ಮಾನ್ಯ ಶ್ರೀರಂಗದೇವರಾಯಲು ಅವರು ಮಾತನಾಡಿದಂತೆ ನಮ್ಮ ತುಂಗಭದ್ರ ಎಡದಂಡೆ ಕಾಲುವೆ ಪ್ರತಿ ವರ್ಷ 2-3 ಸಾರಿ ಒಡೆದು ರೈತರಿಗೆ ಅಪಾರ ಹಾನಿ ಉಂಟು ಮಾಡುತ್ತದೆ. ಈ ವರ್ಷ 25ನೇ ಮೆಯಿನ್‌ನಲ್ಲಿ ಒಡೆದು ಸುಮಾರು 500 ಕೋಟಿ ರೂಪಾಯಿ ಬೆಳೆ ನಷ್ಟವಾಗಿದೆ. ಈ ವರ್ಷದ ಆಯವ್ಯಯದಲ್ಲಿ ದುಡ್ಡು ಇಡಲಾರದೆ ರಿಪೇರಿ ಕಾರ್ಯ ತೆಗೆದುಕೊಳ್ಳತಕ್ಕ ಕೆಲಸವನ್ನು ಸರ್ಕಾರ ಮಾಡಿಲ್ಲ. ನಮ್ಮ ನೀರಾವರಿ ಕಾರ್ಯದರ್ಶಿಯವರು, 11ನೇ ಮೆಯಿನ್ ಅಕ್ವಿಡಿಕ್ಟ್ ಕೆಲಸ ಅರ್ಧಕ್ಕೆ ನಿಂತಿರುವುದನ್ನು ಗಮನಿಸಿದ್ದಾರೆ. ಅದನ್ನು ಪೂರ್ತಿ ಮಾಡದಿದ್ದರೆ, ಮಳೆ ಹೆಚ್ಚು ಕಡಿಮೆಯಾದರೆ ಮತ್ತೆ ರಾಯಚೂರು ಜಿಲ್ಲೆಯ ರೈತರು ಅನಾಹುತಕ್ಕೆ ಈಡಾಗತಕ್ಕದ್ದು ನಿಜ. ಆದರೆ ಅಕ್ವಿಡಿಕ್ಟ್ ಕೆಲಸವನ್ನು ಈ ವರ್ಷ ತೆಗೆದುಕೊಳ್ಳಬಾರದೆಂದು ನೀರಾವರಿ ಕಾರ್ಯದರ್ಶಿಯವರು ಆದೇಶ ಮಾಡಿದ್ದಾರೆ.

ಆದ್ದರಿಂದ, ತಾವು ದಯಮಾಡಿ ಅಕ್ವಿಡಿಕ್ಟ್ ಕೆಲಸವನ್ನು ಪೂರ್ತಿಯಾಗಿ ಮುಗಿಸತಕ್ಕ ವ್ಯವಸ್ಥೆ ಮಾಡಬೇಕು, ಮತ್ತು ಉಳಿದ ಕೆಲಸ ಎಲ್ಲೆಲ್ಲಿ ಕೆನಾಲ್ ವೀಕ್ ಇದೆ, ಆ ವೀಕ್ ಇದ್ದಂಥ ಪಾಯಿಂಟನ್ನಾದರೂ ಗುರುತಿಸಿ ಅದನ್ನು ಬಲಪಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಹೇಳಿದ ಪ್ರಕಾರ 40 ವರ್ಷದ ಕೆನಾಲ್ 150 ಸಾರಿ ಒಡೆದಿದೆ. ಅದಕ್ಕೆ ಈಗಾಗಲೇ ನಾವು ಟೆಕ್ನಿಕಲ್ ಕಮಿಟಿಯವರ ಆದೇಶದಂತೆ ಕಳೆದ 3-4 ವರ್ಷಗಳಿಂದ ಖರ್ಚು ಮಾಡಿದ್ದೇವೆ. ಮಾನ್ಯ ಶ್ರೀರಂಗದೇವರಾಯಲು ಹೇಳಿದಂತೆ 1997-98ರಲ್ಲಿ ನಾವು ಇದ್ದ ಹಣಕ್ಕಿಂತ ಜಾಸ್ತಿ ಹಣವನ್ನು ಖರ್ಚು ಮಾಡಿದ್ದೇವೆ. ಪೆಂಡಿಂಗ್ ಬಿಲ್‌ಗಳು ಇವೆ. ಇದಕ್ಕೋಸ್ಕರ ನಾವು ಈ ವರ್ಷ ಇಟ್ಟ 9 ಕೋಟಿ ರೂಪಾಯಿ ಹಣದಲ್ಲಿ 8 ಕೋಟಿ ರೂಪಾಯಿನಷ್ಟು ಎಸ್ಟಾಬ್ಲಿಷ್‌ಮೆಂಟ್‌ಗೆ ಹೋಗುತ್ತದೆ, ನಿಜ. ಇದನ್ನೆಲ್ಲಾ ಮನಗಂಡು ಅವರು ಹೇಳಿದ 11ನೇ ಮೆಯಿನ್ ಅಕ್ವಿಡಿಕ್ಟ್ ಕೆಲವು ರಿಪೇರಿ ಕೆಲಸ ಇರತಕ್ಕದ್ದು ಇವನ್ನೆಲ್ಲಾ ನಾವು ಐಡೆಂಟಿಫೈ ಮಾಡಿ ಕ್ರಿಟಿಕಲ್ ವರ್ಕ್ಸ್ ಯಾವುದು ಎಂದು ಐಡೆಂಟಿಫೈ ಮಾಡಿದ್ದೇವೆ ಮಾಡಿ 15 ಕೋಟಿ ರೂಪಾಯಿಗೆ ನಾವು ಈ ವರ್ಷ ಮೇ-ಜೂನ್‌ನಲ್ಲಿ ಕೆಲಸ ಮಾಡಬೇಕೆಂದು ಆಲೋಚನೆ ಮಾಡಿ ನಮ್ಮ ಹಣಕಾಸಿನ ಸಚಿವರ ಹತ್ತಿರ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು, ಜವಳಿ ಖಾತೆ ಸಚಿವರು, ಎಂ.ಪಿ, ಎಂ.ಎಲ್.ಎ.ಗಳೆಲ್ಲರೂ ಕೂಡಿ ಮೀಟಿಂಗ್ ಮಾಡಿ ಹೋದ ಸಾರಿ ಬಜೆಟ್ ಕೊಟ್ಟಿದ್ದೆವು. ಈ ಸಾರಿ ನಮಗೆ 15 ಕೋಟಿ ರೂಪಾಯಿ ಕೊಡಬೇಕೆಂದು ಪ್ರಸ್ತಾವನೆ ಕಳುಹಿಸಿ ಆದಮೇಲೆ ಪೇಪರ್ಸ್ ಎಲ್ಲಾ ಫೈನಲೈಸ್ ಆಗಿದೆ. ಮಾನ್ಯ ಹಣಕಾಸಿನ ಸಚಿವರ ಒಪ್ಪಿಗೆ ಪಡೆದ ಮೇಲೆ ಕ್ಯಾಬಿನೆಟ್ ಮುಂದೆ ಇಟ್ಟು ಆದಷ್ಟು ಬೇಗ ಮೇ ತಿಂಗಳಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ. ಮಾನ್ಯ ವಿರೂಪಾಕ್ಷಪ್ಪನವರು ಹೇಳಿದ ಹಾಗೆ 11ನೇ ಮೆಯಿನ್ ಅಕ್ವಿಡಿಕ್ಟ್ ಪೂರ್ಣವಾಗದೆ ಹೋದರೆ ಸುಮಾರು 6 ಲಕ್ಷ ಎಕರೆ ಕೊಲ್ಯಾಪ್ಸ್ ಆಗುತ್ತದೆ. ಕೆಲವು ಪ್ರದೇಶಗಳಲ್ಲಿ ತುಂಬಾ ತುಂಬಾ ಅಪಾಯ ಇದೆ. ಅದನ್ನೆಲ್ಲಾ ನಾವು ಐಡೆಂಟಿಫೈ ಮಾಡಿದ್ದೇವೆ. ಹೆಚ್ಚುವರಿ ಹಣವನ್ನು ಕೇಳಿದ್ದೇವೆ. ಅದು ಹಣಕಾಸಿನ ಸಚಿವರ ಹತ್ತಿರ ಇದೆ. ಅದನ್ನು ತೆಗೆದು ಕ್ಯಾಬಿನೆಟ್ ಮುಂದೆ ಇಟ್ಟು ಮೇ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಿ, ಜೂನ್‌ನಲ್ಲಿ ಪೂರ್ಣ ಮಾಡಿ, ಜೂನ್ ಎರಡನೇ ವಾರದಲ್ಲಿ ನೀರು ಕೊಡುವುದಕ್ಕೆ ನಾವು ಎಲ್ಲಾ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ರಂಗದೇವರಾಯಲು : ಮಾನ್ಯ ಅಧ್ಯಕ್ಷರೆ, ನಾವು ಮೀಟಿಂಗ್‌ನಲ್ಲಿ ಏನಾದರೂ ಪ್ರಸ್ತಾಪ ಮಾಡುವುದಕ್ಕೆ ಹೋದರೆ, ಟೆಕ್ನಿಕಲ್ ರಿಪೋರ್ಟ್ ಪ್ರಕಾರ ನಾವು ಕೆನಾಲ್ ಅನ್ನು ಆ ಸಮಯದಲ್ಲಿ ಮುಚ್ಚಬೇಕೆಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಟೆಕ್ನಿಕಲ್ ರಿಪೋರ್ಟ್ ಒಪ್ಪುತ್ತೇವೆ, ಎಲ್ಲಾ ಒಪ್ಪುತ್ತೇವೆ, ತಮ್ಮ ಮಾತಿನ ಪ್ರಕಾರ ಆಗುತ್ತದೆ. ಆದರೆ ಏನಾಗುತ್ತದೆಂದರೆ ಮೇ 10ರವರೆಗೆ ನೀರು ಕೊಡಿ ಎಂದರೆ ಇಲ್ಲ. ನಮಗೆ ಕೆನಾಲ್ ಬೇಗ ಕ್ಲೋಸ್ ಮಾಡಬೇಕು, ನಾವು ಬೇಗ ನೀರು ಕೊಡಬೇಕೆಂದು ನಮಗೆ ಟೆಕ್ನಿಕಲ್ ರಿಪೋರ್ಟ್ ಬರುತ್ತದೆ. ಇದುವರೆಗೆ ಕೆಲಸ ಪ್ರಾರಂಭ ಮಾಡಿಲ್ಲ. ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ? ತಮಗೆ ಫೋಟೋ ಕಳುಹಿಸಿಕೊಡುತ್ತೇನೆ, ತಾವು

ದಯಮಾಡಿ ನೋಡಿ. ಕೆನಾಲ್‌ಗಳ ಪರಿಸ್ಥಿತಿ ಹೇಗಿದೆ ಎಂಬುದು ಅದರಿಂದ ಗೊತ್ತಾಗುತ್ತದೆ. ಮೇಜರ್ ಕೆನಾಲ್‌ಗಳು ಬಂದು 17,21 ಮತ್ತು 25. ಡಿಸ್ಟ್ರಿಬ್ಯೂಟರಿಗಳು ಕೆನಾಲ್ ಎಂದು ಹೇಳುವ ಸ್ಟೇಜ್‌ನಲ್ಲಿ ಇಲ್ಲ. ಹಳ್ಳ ಇದ್ದ ಹಾಗೆ ಇದೆ. ಅಲ್ಲಿ ನೀರು ಮುಟ್ಟಬೇಕಾದರೆ ಬಹಳ ಕಷ್ಟ ಇದೆ. ರಾಯಚೂರು ಜಿಲ್ಲೆಯಲ್ಲಿ ರೈತರ ಪರಿಸ್ಥಿತಿ ಏನು ಎಂದು ನೋಡಿ. ಅಲ್ಲಿ ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರಷ್ಟು ಒಳ್ಳೆಯ ಜನರು ಇದ್ದ ಕಾರಣ ಅಷ್ಟು ಸೀರಿಯಸ್ ಆಗಿ ಬಂದಿಲ್ಲ. ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಯಚೂರು ಜಿಲ್ಲೆಗೆ ಪರಿಹಾರ ಏನು ಕೊಡುತ್ತೀರಿ? ಒಂದು ನಿಮಗೆ ಬಹಳ ಬಾಧೆಯಿಂದ ಹೇಳಬೇಕಾದರೆ ನಮ್ಮ ಗಂಗಾವತಿ ತಾಲ್ಲೂಕಿನಲ್ಲಿ 25ನೇ ಡಿಸ್ಟ್ರಿಬ್ಯೂಟರಿವರೆಗೆ ಎ-ಕ್ಲಾಸ್ ಲ್ಯಾಂಡ್ ಎಂದು ನಮಗೆ 10 ಎಕರೆ ಸೀಲಿಂಗ್ ಲಿಮಿಟ್ ಮಾಡಿದ್ದಾರೆ. ನಮಗೆ ಎರಡು ಕ್ರಾಪ್ಸ್ ಪ್ಯಾಡಿ, ಒಂದು ಷುಗರ್‌ಕೇನ್ ಎಂದು ಮಾಡಿದ್ದಾರೆ. ನೀವು ನೀರು ಎಲ್ಲಿಯವರೆಗೆ ಕೊಡುತ್ತಿದ್ದೀರಿ? ನಮ್ಮ ರೈತರ ಪರಿಸ್ಥಿತಿ ಏನು? ಒಬ್ಬ ವ್ಯಕ್ತಿಗೆ ಹತ್ತು ಎಕರೆ ಜಮೀನಿದ್ದರೆ ಅವನು ಹೇಗೆ ಜೀವನ ಮಾಡುತ್ತಾನೆ? ಇದರ ಬಗ್ಗೆ ತಾವು ಏನು ಆಲೋಚನೆ ಮಾಡಿದ್ದೀರಿ?

ಶ್ರೀ ಕೆ.ಎನ್. ನಾಗೇಗೌಡ : ಅವರು ಹೇಳಿದ ಪ್ರಕಾರ ಸೀರಿಯಸ್ ಇದೆ ಎಂದು ತಿಳಿದುಕೊಂಡೇ ಡಿಸ್ಟ್ರಿಬ್ಯೂಟರೀಸ್ ರಿಪೇರ್ಸ್ ಮತ್ತು ಕ್ರಿಟಿಕಲ್ ವರ್ಕ್ಸ್‌ನಲ್ಲಿ ಎರಡು ಕೋಟಿ ರೂಪಾಯಿಗಳನ್ನು ಮಾರ್ಕ್ ಮಾಡಿ ಇಟ್ಟಿದ್ದೇವೆ. ಅವರು ಎಷ್ಟು ಎಷ್ಟು ಲೆಂಗ್ತ್ ಹೇಳಿದ್ದಾರೆ ಆ ಎಲ್ಲಾ ಲೆಂಗ್ತ್‌ಗಳನ್ನು ಸೇರಿಸಿಕೊಂಡು ಸುಮಾರು 170 ಚೈನ್ ಕವರ್ ಮಾಡಿದ್ದೇವೆ. ಮಾನ್ಯ ಉಪ ಮುಖ್ಯ ಮಂತ್ರಿಗಳು ಇದ್ದಾರೆ. ಅವರು ಕ್ಯಾಬಿನೆಟ್ ಮುಂದೆ ತಂದು ಅಡಿಷನಲ್ ಅಮೌಂಟ್ ತೆಗೆದುಕೊಂಡು ಮೇ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆ.

ಪಶುಸಂಗೋಪನಾ ಇಲಾಖೆಯ ನಿರ್ದೇಶಕರು ಕಾನೂನು ಬಾಹಿರವಾಗಿ 2.2 ಕೋಟಿ ರೂ.ಗಳನ್ನು ಔಷಧಿಗಳನ್ನು ಕೊಳ್ಳಲು ನಿರ್ಧಾರ ಕೈಗೊಂಡಿರುವುದು

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ರಾಜ್ಯದ ಹಣಕಾಸಿನ ಜವಾಬ್ದಾರಿ ಹೊತ್ತಂಥ ಉಪ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ತಾವು ಬಹಳ ಕಷ್ಟಪಟ್ಟು ರಾಜ್ಯದ ವಿವಿಧ ಇಲಾಖೆಗಳಿಗೆ ಹಣ ಕೊಡುತ್ತೀರಿ. ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಆಗಬೇಕೆಂದು ಯಾವ ರೀತಿ ಲಂಗು ಲಗಾಮು ಇಲ್ಲದೆ, ಯಾವ ಉದ್ದೇಶಕ್ಕೆ ಖರ್ಚು ಮಾಡಬೇಕು ಅದಕ್ಕೆ ಮಾಡದೆ ಹಣ ದುರುಪಯೋಗವಾಗುತ್ತಿರುವುದಕ್ಕೆ ಒಂದು ತಾಜಾ ಉದಾಹರಣೆಯನ್ನು ಬಹಳ ಸಂಕ್ಷಿಪ್ತವಾಗಿ ಕೊಡುತ್ತೇನೆ. ಪಶು ಸಂಗೋಪನಾ ಇಲಾಖೆಯಲ್ಲಿ 1997-98ನೇ ವರ್ಷ ಮಾರ್ಚ್ 31ಕ್ಕೆ ಮುಗಿಯಿತು. ಎರಡನೇ ಅರ್ಧ ವರ್ಷ ಏನಿದೆ ಅದರಲ್ಲಿ ಔಷಧಿ ಕೊಂಡುಕೊಳ್ಳತಕ್ಕ ಹಣ 2.2 ಕೊಟಿ ರೂಪಾಯಿ ಉಳಿಯಿತು. ಅವರು ಔಷಧಿ ಕೊಂಡುಕೊಂಡಿರಲಿಲ್ಲ. ಏಕೆಂದರೆ ರೇಟ್ ಕಾಂಟ್ರಾಕ್ಟ್ ಫೈನಲೈಸ್ ಆಗಿರಲಿಲ್ಲವೆಂದು. ತಾ:17.3.98ರಲ್ಲಿ ಪಶು ಸಂಗೋಪನಾ ಇಲಾಖೆಯ ಹೈಪವರ್ ಕಮಿಟಿ ಮೀಟಿಂಗ್ ನಡೆಯಿತು. ಆ ಹೈ ಪವರ್ ಕಮಿಟಿಯಲ್ಲಿ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಯವರು ಬಂದರು. ಅವರು ಬಂದು ಹೇಳಿದರು, ಇನ್ನು ಹದಿಮೂರೇ ದಿವಸ ಇರುವುದು, ನಾವು ಹಣ ಖರ್ಚು